1	2	3	4
10.	ಹಾಸನ	8	16,96,968-00
11.	ಚಿಕ್ಕಮಗಳೂರು ತಾಲ್ಲೂಕು	3	16,96,968-00
	ವಿಧಾನ ಸಭಾ ಕ್ಷೇತ್ರ	5	
12.	ಶಿವಮೊಗ್ಗ	8	16,96,968-00
13.	ಬೆಳಗಾಂ	18	38,18,178-00
14.	ಧಾರವಾಡ	7	14,84,847-00
15.	ಬಿಜಾಪುರ	8	16,96,968-00
16.	ಉತ್ತರ ಕನ್ನಡ ತಾಲ್ಲೂಕುವಾರು	11	23,33,331-00
17.	ಗುಲ್ಬರ್ಗಾ	13	27,57,578-00
18.	ಬಳ್ಳಾರಿ	8	16,96,968-00
19.	ರಾಯಚೂರು	6	12,72,726-00
20.	ಬೀದರ್	6	12,72,726-00
21.	ಚಾಮರಾಜನಗರ	5	10,60,605-00
22.	ಬಾಗಲಕೋಟೆ	7	14,84,847-00
23.	ಉಡುಪಿ	6	12,72,726-00
24.	ಗದಗ್	5	10,60,605-00
25.	ಹಾವೇರಿ	6	12,72,726-00
26.	ಚಿತ್ರದುರ್ಗ	7	14,84,847-00
27.	ಕೊಪ್ಪಳ	5	10,60,654-00
		217	**4,90,00,000-00**
		ತಾಲ್ಲೂಕು 14	
		ಒಟ್ಟು 231	

ಧಾರವಾಡ ಮಿನಿ ವಿಧಾನ ಸೌಧದ ಬಗ್ಗೆ

214 (294) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯ ಅವರಣದಲ್ಲಿ ಕಟ್ಟಲಾಗುತ್ತಿರುವ ಮಿನಿ ವಿಧಾನ ಸೌಧದ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ನಿಜವೆ?

ಆ) ಕೆಲಸ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನ?

ಇ) ಈ ಮಿನಿ ವಿಧಾನ ಸೌಧ ಕಟ್ಟಡಕ್ಕೆ ಒಟ್ಟು ಮಂಜೂರಾದ ಹಣವೆಷ್ಟು? ಈವರೆಗೆ ಖರ್ಚು ಮಾಡಿದ ಹಣವೆಷ್ಟು? ಖರ್ಚು ಮಾಡದೇ ಉಳಿದ ಹಣವೆಷ್ಟು?

ಈ) ಸ್ಥಗಿತಗೊಂಡಿರುವ ಕಟ್ಟಡದ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು? ಇಲ್ಲವಾದರೆ ಕಾರಣವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ಕೆಲಸವನ್ನು ಈಗ ಪುನರಾರಂಭಿಸಿದೆ.

ಆ) ಸದರಿ ಮಿನಿ ವಿಧಾನ ಸೌಧ ಕಟ್ಟಡದ ಪ್ರಸ್ತುತ ಇದ್ದ ಸಬ್ ಬೇಸ್‌ಮೆಂಟ್ ಮಹಡಿಯನ್ನು ಬೇಸ್‌ಮೆಂಟ್ ಮಹಡಿ ಎಂದು ಪರಿಗಣಿಸಿ ಅದರ ಮೇಲೆ ಎರಡು ಮಹಡಿಗಳನ್ನು ನಿರ್ಮಿಸಲು ತೀರ್ಮಾನಿಸಿದೆ ಕಾರಣ ಈ ಕಾಮಗಾರಿಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಈ ಎರಡು ಮಹಡಿಗಳ ಕಟ್ಟಡ ಕಾಮಗಾರಿಗೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಿ ಈಗಾಗಲೇ ಕಾರ್ಯಾದೇಶ ನೀಡಲಾಗಿದೆ. ಈ ಕಾಮಗಾರಿಯನ್ನು ದಿನಾಂಕ 8-7-2002 ರಂದು ಪುನರಾಂಭಿಸಲಾಗಿದೆ.

ಇ) 1) ಮಂಜೂರಾದ ಅಂದಾಜು ಮೊತ್ತ ರೂ. 330.00 ಲಕ್ಷಗಳು.

2) 2002 ಜೂನ್ ಅಂತ್ಯದವರೆಗೆ ಖರ್ಚು ಮಾಡಿದ ಮೊತ್ತ ರೂ. 147.87 ಲಕ್ಷಗಳು.

3) ಖರ್ಚು ಮಾಡದೆ ಉಳಿದ ಹಣ - ಇಲ್ಲ

ಈ) ಕಾಮಗಾರಿಯನ್ನು ದಿನಾಂಕ 8-7-2002 ರಂದು ಪ್ರಾರಂಭಿಸಲಾಗಿದೆ.

ಹುಬ್ಬಳ್ಳಿ, ಗಂಗಾಧರನಗರದಿಂದ ಮಂಟೂರುವರಿಗೂ ರಸ್ತೆ ಡಾಂಬರೀಕರಣ

215(295) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್ ಖಾನ್ (ಹುಬ್ಬಳ್ಳಿ ನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಹುಬ್ಬಳ್ಳಿ, ಗಂಗಾಧರನಗರದಿಂದ ಮಂಟೂರ ವರೆಗೆ ರಸ್ತೆ ತುಂಬಾ ಕೆಟ್ಟಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ರಸ್ತೆಗೆ ನಬಾರ್ಡ್ ಇಲ್ಲವೆ ಲೋಕೋಪಯೋಗಿ ಇಲಾಖೆಯಿಂದ ಕೆಲಸ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಬಂದಿದೆಯೇ?

3. ಈ ರಸ್ತೆಗೆ ತಗಲುವ ಅಂದಾಜು ವೆಚ್ಚ ಎಷ್ಟು?